ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY

ಸೆಂಟ್ರಲ್ ಕಾಲೇಜು ಆವರಣ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು– 560 001.

Ph.No.080–22961016 / 22131385 E-Mail ID: registrarbcu@gmail.com

ಸಂಖ್ಯೆ: ಬೆ.ನ.ವಿ./ಕು.ಸ./ಸುತ್ತೋಲೆ/2022–23 ದಿನಾಂಕ: 18.06.2022

ರವರಿಗೆ,

ಎಲ್ಲಾ ಕಾಲೇಜ್‌ಗಳ ಪ್ರಾಂಶುಪಾಲರು

ಸಂಯೋಜಿತ ಕಾಲೇಜುಗಳು,

ಬೆಂಗಳೂರು ನಗರ ವಿಶ್ವವಿದ್ಯಾನಿಲಯ,

ಬೆಂಗಳೂರು.

ಮಾನ್ಯರೇ,

ವಿಷಯ: ದಿನಾಂಕ: 20.06.2022 ರಂದು ಮಾನ್ಯ ಪ್ರಧಾನ ಮಂತ್ರಿಗಳು ಬೆಂಗಳೂರುಗೆ ಭೇಟಿ ನೀಡುತ್ತಿರುವ ಹಿನ್ನಲೆಯಲ್ಲಿ ಗಣ್ಯ ವ್ಯಕ್ತಿಗಳು ಸಂಚರಿಸುವ ಮಾರ್ಗಗಳ ಸುತ್ತಮುತ್ತ ಇರುವ, ಉನ್ನತ ಕಾಲೇಜುಗಳಿಗೆ ರಜೆ ಘೋಷಿರುವ ಕುರಿತು.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ 187 ಯುಎನ್ಇ 2022, ದಿನಾಂಕ: 18.06.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 20.06.2022 ರಂದು ಮಾನ್ಯ ಪ್ರಧಾನ ಮಂತ್ರಿಗಳು, ಬೆಂಗಳೂರಿಗೆ ಭೇಟಿ ನೀಡಿ, ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದು, ಈ ಕೆಳಕಂಡ ಪ್ರಮುಖ ಮಾರ್ಗಗಳಾದ ಐ.ಐ.ಎಸ್.ಸಿ ಗೊರಗುಂಟೆಪಾಳ್ಯ, ಸಿ.ಎಂ.ಟಿ.ಐ. ರಿಂಗ ರಸ್ತೆ, ಡಾ॥ ರಾಜ್ ಕುಮಾರ್ ಸ್ಮಾರಕ ಮೇಲ್ಸೇತುವೆ, ಲಗ್ಗೆರೆ ಸೇತುವೆ. ನಾಯಂಡಹಳ್ಳಿ, ಮೈಸೂರು ರಸ್ತೆ, ಆರ್.ವಿ ಕಾಲೇಜ್ ಮೂಲಕ ಕೆಂಗೇರಿಯ ಕೊಮ್ಮಘಟ್ಟದಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿ, ನಂತರ ಜ್ಞಾನಭಾರತಿ ಭೇಟಿ ಅಲ್ಲಿಂದ ನಾಗರಭಾವಿ ಸುಮ್ಮನಹಳ್ಳಿ ಮೇಲ್ ಸೇತುವೆ, ಎಂ.ಇ.ಐ ಜಂಕ್ಷನ್, ಯಂಶವಂತಪುರ ಮೂಲಕ ಜಕ್ಕೂರು ವಿಮಾನ ನಿಲ್ದಾಣಕ್ಕೆ ತೆರಲಿದ್ದಾರೆ.

ಈ ಸ್ಥಳಗಳಲ್ಲಿ ಅಂದು ಬೆಳಿಗ್ಗೆಯಿಂದ ಸಂಜೆಯವರೆವಿಗೂ ಸಂಚಾರ ದಟ್ಟಣೆ ಅಧಿಕವಾಗುವುದರಿಂದ ಮತ್ತು ಮಾನ್ಯ ಪ್ರಧಾನ ಮಂತ್ರಿಗಳ ಭದ್ರತೆಯ ದೃಷ್ಟಿಯಿಂದ ಈ ಮಾರ್ಗಗಳಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ರಜೆ ಘೋಷಿಸುವಂತೆ ಉಲ್ಲೇಖಿತ ಪತ್ರದ ಮೂಲಕ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆರವರ ನಿರ್ದೇಶಿಸಿರುತ್ತಾರೆ. ಆದುದರಿಂದ ಇದರ ಬಗ್ಗೆ ಸಂಬಂಧಪಟ್ಟ ಸಂಯೋಜಿತ ಕಾಲೇಜುಗಳು ರಜೆ ಘೋಷಿಸುವ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸೂಚಿಸಲಾಗಿದೆ.

ಕುಲಸಚಿವರು

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿ, ಬೆಂ.ನ.ವಿ., ಬೆಂಗಳೂರು.
2. ಕಛೇರಿ ಪ್ರತಿ / ರಕ್ಷಾ ಕಡತ.
3. ವಿಶ್ವವಿದ್ಯಾನಿಲಯದ ಜಾಲತಾಣಕ್ಕೆ ಅಪ್‌ಲೋಡ್ ಮಾಡುವುದು.